<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.92/2020</u>

ದಿಃ 25.03.2022
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Dw-4

| | | |
|---|---|---|
| ಹೆಸರು | ಃ | ಸುರೇಶ್ @ ಕೆಂಗಲ್ಲ |
| ತಂದೆಯ ಹೆಸರು | ಃ | ತಮ್ಮಯ್ಯ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಸಂತೆಮೊಗೇನಹಳ್ಳಿ, ಚನ್ನಪಟ್ಟಣ ತಾಲ್ಲೂಕು |

<u>ಮುಖ್ಯ ವಿಚಾರಣೆಃ ಶ್ರೀ. ಬಿ.ಸಿ.ವಿ., ವಕೀಲರಿಂದ ಆರೋಪಿಗಳ ಪರವಾಗಿಃ</u>

ನ್ಯಾಯಾಲಯದ ಮುಂದಿರುವ 1ನೇ ಆರೋಪಿ ನನಗೆ ಪರಿಚಿತರಿದ್ದು ಅವರು ನಮ್ಮ ಊರಿನ ಮುಖಂಡರು ಮತ್ತು ಗ್ರಾಮ ಪಂಚಾಯ್ತಿ ಸದಸ್ಯರಾಗಿರುತ್ತಾರೆ. ನನಗೆ ಚಾಸಾ.6 ಸುಮಾರು 15 ವರ್ಷಗಳಿಂದ ಗೊತ್ತು. ಅವರು ನಮ್ಮ ಊರಿನ ಮೊಮ್ಮಗಳಿರುತ್ತಾರೆ. ಅವರ ತಾಯಿಯ ಊರು ಸಂತೆಮೊಗೇನಹಳ್ಳಿ, ತಂದೆಯ ಊರು ಹೊಂಗನೂರು. ಹೊಂಗನೂರಿನಲ್ಲಿ ನನ್ನ ಅಕ್ಕ ಜಯಲಕ್ಷ್ಮಿ ವಾಸವಿರುತ್ತಾರೆ. ನಾನು ಅವರ ಮನೆಗೆ ಆಗಾಗ ಹೋಗುತ್ತಿರುತ್ತೇನೆ. ನನ್ನ ಅಕ್ಕ ಮತ್ತು ಚಾಸಾ.6ರವರ ತಂದೆಯ ಮನೆ ಎದುರುಬದಿರು

ಇರುತ್ತದೆ. ನನ್ನ ಅಕ್ಕನ ಮನೆಗೆ ಹೋದಾಗ ಚಾಸಾ.6 ಪರಿಚಿತರಾಗಿರುತ್ತಾರೆ. ಅವರನ್ನು ವಿರೂಪಾಕ್ಷಿಪುರಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ. ವಿರೂಪಾಕ್ಷಿಪುರದಲ್ಲಿ ನನ್ನ ಅಣ್ಣ ಶಿವಕುಮಾರ್ ಇರುತ್ತಾರೆ. ನನ್ನ ಅಣ್ಣ ಮತ್ತು ಚಾಸಾ.6ರವರ ಪತಿ ಮನೆ ಅಕ್ಕಪಕ್ಕ ಇರುತ್ತದೆ. ಅಲ್ಲಿಯೂ ನಾನು ಅವರೊಂದಿಗೆ ಮಾತನಾಡುತ್ತಿದ್ದೆ.

2. ಚಾಸಾ.6ರವರು 10 ವರ್ಷಗಳ ಹಿಂದೆ ಕ್ರಿಶ್ಚಿಯನ್ ಜನಾಂಗಕ್ಕೆ ಪರಿವರ್ತನೆಗೊಂಡಿರುತ್ತಾರೆ. ಆ ಮುನ್ನ ಅವರು ಹರಿಜನ ಜಾತಿಯವರು. ನಾನೂ ಸಹ ಹರಿಜನ ಜಾತಿಯವರು. ಚಾಸಾ.6 ನನಗೆ ಸಂಬಂಧಿ.

3. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ಚಾಸಾ.6 ಮತ್ತು ಇತರ ವ್ಯಕ್ತಿಗಳು ನಮ್ಮ ಮನೆ ಸಂತೆಮೋಗೇನಹಳ್ಳಿಗೆ ಬಂದಿದ್ದರು. ಅವರು ನನಗೆ ಕ್ರಿಶ್ಚಿಯನ್ ಜನಾಂಗಕ್ಕೆ ಮತಾಂತರವಾಗುವಂತೆ ಮತ್ತು ಅದರಿಂದ ಹಣ ಹಾಗೂ ಇತರೆ ಅನುಕೂಲತೆಗಳು ಆಗುತ್ತವೆ ಎಂದು ಹೇಳಿದರು. ಆಗ ನಾನು ನನ್ನ ವ್ಯವಸಾಯದ ಕೆಲಸಗಳನ್ನು ಮಾಡಿಕೊಂಡಿದ್ದು ನಾನು ಮತಾಂತರವಾಗುವುದಿಲ್ಲವೆಂದು ಹೇಳಿದ್ದೆ. ಆನಂತರವೂ 2 ತಿಂಗಳಾದ ಮೇಲೆ ಮತ್ತೆ ಬಂದು ಮತಾಂತರವಾಗುವಂತೆ ಬಲವಂತ ಮಾಡಿದ್ದು, ನಾನು ನಿರಾಕರಿಸಿದೆ.

4. ನಾನು 1ನೇ ಆರೋಪಿ ಮತ್ತು ಗುಂಡಪ್ಪನವರಿಗೆ ಊರಿಗೆ ಮುಖಂಡರಾದ ಕಾರಣ ಚಾಸಾ.6 ಮತ್ತು ಇತರರು ನನ್ನನ್ನು ಮತಾಂತರಕ್ಕೆ ಬಲವಂತ ಮಾಡುತ್ತಿದ್ದ ವಿಚಾರವನ್ನು ತಿಳಿಸಿದೆ. ಚಾಸಾ.6ರವರು ನಮ್ಮ ಮನೆಗೆ ಬಂದಿದ್ದಾಗ ಚನ್ನಪಟ್ಟಣದ ರವಿಕುಮಾರ್ ಎನ್ನುವವರ ಬಳಿ ಬರುವಂತೆ ಕರೆದಿದ್ದರು. ನಾನು ಈ ವಿಷಯಗಳ್ನು ಪೊಲೀಸರಿಗೆ ತಿಳಿಸಿಲ್ಲ.

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ ಕಾಲಾವಕಾಶ ಕೋರಿದ್ದು ಅನುಮತಿಸಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.